# ದಿನಾಂಕ:–04–09–2021 (ಶನಿವಾರ) ರಂದು ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ ವಾರ್ಡ್ ಸಮಿತಿ ಸಭೆ ನಡವಳಿಗಳು

*********

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ ವಾರ್ಡ್ ಸಮಿತಿ ಸಭೆಯು ದಿನಾಂಕ:–04–09–2021 ಶನಿವಾರ 11.00 ಗಂಟೆಗೆ ನೋಡೆಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಉಪ ವಿಭಾಗದ ಕಛೇರಿಯಲ್ಲಿ ನಡೆದಿರುತ್ತದೆ.

<u>ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ</u>

| ಕ್ರ.ಸಂ | ಅಧಿಕಾರಿಗಳು ಮತ್ತು ಸದಸ್ಯರ ಹೆಸರು | ಪದನಾಮ | ಇಲಾಖೆ | ಹಾಜರಾತಿ |
|---|---|---|---|---|
| 1 | ಶ್ರೀ. ರಾಧಕೃಷ್ಣ | ನೋಡಲ್ ಅಧಿಕಾರಿ | ಕಾರ್ಯಪಾಲಕ ಅಭಿಯಂತರರು ಚಾಮರಾಜಪೇಟೆ ವಿಭಾಗ | ಹಾಜರಾಗಿರುತ್ತಾರೆ |
| 2 | ಶ್ರೀ. ಕೆ.ಎಸ್. ಸ್ವಾಮಿ | ಕಾರ್ಯದರ್ಶಿ | ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ | ಹಾಜರಾಗಿರುತ್ತಾರೆ |
| 3 | ಶ್ರೀ. ಮಾರುತಿ ಸೇಟ್ | ಸದಸ್ಯರು | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ | ಹಾಜರಾಗಿರುತ್ತಾರೆ |
| 4 | ಶ್ರೀ. ಎನ್.ಕೃಷ್ಣಮೂರ್ತಿ | ಸದಸ್ಯರು | ತೋಟಗಾರಿಕೆ ಇಲಾಖೆ | ಹಾಜರಾಗಿರುತ್ತಾರೆ |
| 5 | ಶ್ರೀ. ಸಂದೀಪ್ ಕುಮಾರ್ | ಸದಸ್ಯರು | ಘನತ್ಯಾಜ್ಯ ಇಲಾಖೆ | ಹಾಜರಾಗಿರುತ್ತಾರೆ |
| 6 | ಶ್ರೀ. ಜಿ.ಸಿ. ಬಾಲರಾಜ್ | ಸದಸ್ಯರು | ಕೆಲಸ ಪರಿವೀಕ್ಷಕರು (ಪ್ರಭಾರ) ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ | ಹಾಜರಾಗಿರುತ್ತಾರೆ |
| 7 | ಶ್ರೀ. ಎಸ್. ಸೋಮಣ್ಣ | ಸದಸ್ಯರು | ಸಾರ್ವಜನಿಕರು | ಹಾಜರಾಗಿರುತ್ತಾರೆ |
| 8 | ಶ್ರೀ. ಸಿ. ನಾರಾಯಣ್ | ಸದಸ್ಯರು | ಸಾರ್ವಜನಿಕರು | ಹಾಜರಾಗಿರುತ್ತಾರೆ |

ವಾರ್ಡ್ ಕಮಿಟಿ ಸಭೆಯನ್ನು ನಡೆಸುವ ಕುರಿತಾಗಿ ದಿನಾಂಕ:–04–09–2021 ರ ಸಭೆಯ ಸೂಚನಾ ಪತ್ರವನ್ನು ವಾರ್ಡ್ ಸಂಖ್ಯೆ : 132ಕ್ಕೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗೆ ಕಳುಹಿಸಿಕೊಡಲಾಗಿರುತ್ತದೆ ಹಾಗೂ ವಾರ್ಡ್ ಸಂಖ್ಯೆ : 132 ವಾಟ್ಸ್ ಆಫ್ ಗ್ರೂಪ್‌ಗೆ ಸದರಿ ಸಭೆಯ ಸೂಚನಾ ಪತ್ರವನ್ನು ಹಾಕಲಾಗಿರುತ್ತದೆ.

ಸಭೆಯ ಪ್ರಾರಂಭಿಕ ಹಂತದಲ್ಲಿ ವಾರ್ಡ್ ಕಾರ್ಯದರ್ಶಿ ರವರು ಸಭೆಗೆ ಹಾಜರಿದ್ದ ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರನ್ನು ಸ್ವಾಗತಿಸಿದರು.

<u>ಸಭೆಯಲ್ಲಿ ಸಾರ್ವಜನಿಕ ದೂರುಗಳಿಗೆ ಸಂಬಂಧಿಸಿದಂತೆ ಚರ್ಚಿಸಲಾಯಿತು.</u>

1. **<u>ತೋಟಗಾರಿಕೆ ಇಲಾಖೆ</u>** : Gazeeba ಸೋರುತ್ತಿದ್ದು, Waking Path ನ್ನು ಸಹ ಸರಿಪಡಿಸಲು ಸಮಿತಿ ಸದಸ್ಯರಾದ ನಾರಾಯಣ್ ರವರು ಕೋರಿದ್ದು, ಇದನ್ನು ಶೀಘ್ರವಾಗಿ ಸರಿಪಡಿಸುವಂತೆ ಕೃಷ್ಣಮೂರ್ತಿ ತೋಟಗಾರಿಕೆ ಇಲಾಖೆರವರಿಗೆ ನೊಡೇಲ್ ಅಧಿಕಾರಿರವರು ಸೂಚಿಸಿರುತ್ತಾರೆ.

**ಕ್ರಮ** : ತೋಟಗಾರಿಕೆ ಇಲಾಖೆ

2. **<u>ಘನತ್ಯಾಜ್ಯ ನಿರ್ವಹಣೆ</u>** : ಚಂದ್ರಾ ಲೇಔಟ್ ಬಿಟಿಎಸ್ ಬಸ್ ಸ್ಟಾಪ್ ಹಿಂಭಾಗ ಪಾರ್ಕ್ ಬಳಿ ಗಾರ್ಬೇಜ್ ಇದ್ದು, ಇದನ್ನು ತೆಗೆಯುವಂತೆ ನಾರಾಯಣ್ ರವರು ಕೋರಿದ್ದು, ಅದರಂತೆ ಕ್ರಮವಹಿಸಲು ಸಂಬಂಧಪಟ್ಟವರಿಗೆ ನೊಡೇಲ್ ಅಧಿಕಾರಿರವರು ಸೂಚಿಸಿರುತ್ತಾರೆ.

**ಕ್ರಮ** : ಘನತ್ಯಾಜ್ಯ ನಿರ್ವಹಣೆ ಇಲಾಖೆ

3. **<u>ಆರೋಗ್ಯ ಇಲಾಖೆ:</u>** ಕೋವಿಡ್–19 ಆಶಾ ಕಾರ್ಯಕರ್ತರು ಎಷ್ಟು ಜನ ಇದ್ದಾರೆ ಎಂದು ನೊಡೇಲ್ ಅಧಿಕಾರಿಯವರು ಕೇಳಿದಾಗ ವಾರ್ಡ್ ಸಂಖ್ಯೆ : 132 ರಲ್ಲಿ ಒಟ್ಟು 03 ಜನ ಆಶಾ ಕಾರ್ಯಕರ್ತರಿದ್ದಾರೆ, ಅವರು ಕೋವಿಡ್–19 ಲಸಿಕೆ ನಿರ್ವಹಿಸುತ್ತಿದ್ದಾರೆಂದು ಹಿರಿಯ ಆರೋಗ್ಯ ಪರಿವೀಕ್ಷಕರಾದ ಮಾರುತಿಶೇಟ್ ರವರು ಸಭೆಗೆ ಮಾಹಿತಿ ನೀಡಿರುತ್ತಾರೆ. Vaccination ಅನ್ನು ಎಲ್ಲಾ ಸಾರ್ವಜನಿಕರಿಗೆ ಸೂಕ್ತವಾಗಿ ಕಲ್ಪಿಸುವಂತೆ ನೊಡೇಲ್ ಅಧಿಕಾರಿರವರು ಸೂಚಿಸಿರುತ್ತಾರೆ.

**ಕ್ರಮ** : ಆರೋಗ್ಯ ವೈಧ್ಯಾಧೀಕಾರಿ ಇಲಾಖೆ

4. **<u>ಕಾಮಗಾರಿ ಇಲಾಖೆ</u>** : ಚಂದ್ರಾ ಲೇಔಟ್ ಅಶ್ವತ್ಥ್ ಕಟ್ಟೆ ಕಟ್ಟಡದ ರಸ್ತೆಯಲ್ಲಿ ಡ್ರೈನ್ ಡೀಸಿಲ್ಟಿಂಗ್ ಮಾಡಲು ನಾರಾಯಣ್ ರವರು ಕೋರಿದ್ದು, ಅಗತ್ಯ ಕ್ರಮವಹಿಸಲು ನೊಡೇಲ್ ಅಧಿಕಾರಿರವರು ಸೂಚಿಸಿರುತ್ತಾರೆ.

**ಕ್ರಮ** : ಕಾಮಗಾರಿ ಇಲಾಖೆ

ಸಭೆಗೆ ಗೈರು ಹಾಜರಾಗಿರುವ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ತೀವ್ರ ಅಸಮದಾನ ವ್ಯಕ್ತಪಡಿಸಿದ್ದು, ಮುಂದಿನ ಸಭೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ತಪ್ಪದೆ ಹಾಜರಾಗುವಂತೆ ಸಭೆಯು ತೀರ್ಮಾನಿಸಿರುತ್ತದೆ. ಗೈರು ಹಾಜರಾದ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಅವರ ಇಲಾಖೆಗಳ ಮೇಲಾಧಿಕಾರಿಗಳಿಗೆ ವರದಿ ಮಾಡಲಾಗುವುದೆಂದು ನೊಡಲ್ ಅಧಿಕಾರಿಯವರು ಸೂಚಿಸಿರುತ್ತಾರೆ.

ಅಂತಿಮವಾಗಿ ನೋಡಲ್ ಅಧಿಕಾರಿಯವರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ ಸ್ಪಂದಿಸಿ ಪರಿಹರಿಸಲು ಕ್ರಮತೆಗೆದುಕೊಂಡು ಸಂಬಂಧಪಟ್ಟ ಇಲಾಖೆಗಳು ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ನೋಡಲ್ ಅಧಿಕಾರಿರವರ ಆದೇಶದ ಮೇರೆಗೆ**

ಕಾರ್ಯದರ್ಶಿ

**ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ**

**<u>ಪ್ರತಿಯನ್ನು:-</u>**

1. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಮುಖ್ಯ ಅಭಿಯಂತರರು (ದಕ್ಷಣ) ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಉಪ ವಿಭಾಗ ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
5. ಕಛೇರಿ ಕಡತಕ್ಕಾಗಿ.